# 2001ರ ಕರ್ನಾಟಕ ಅಧಿನಿಯಮ ಸಂಖ್ಯೆ: 30

# ಕರ್ನಾಟಕ ಪಂಚಾಯತ್‌ರಾಜ್ ( ಮೂರನೇ ತಿದ್ದುಪಡಿ) ಅಧಿನಿಯಮ 2000

## ಪ್ರಕರಣಗಳ ಪಟ್ಟಿ

ಪ್ರಕರಣಗಳು:

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ

2. 58ಎ ಹೊಸ ಪ್ರಕರಣದ ಸೇರ್ಪಡೆ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಪ್ರತಿಯೊಂದು ಗ್ರಾಮ ಪಂಚಾಯತಿಯು, ಪಂಚಾಯತಿ ಪ್ರದೇಶದಲ್ಲಿಯ ಯಾವುದೇ ಜೀತಗಾರಿಕೆ ಪದ್ಧತಿಯ ಪ್ರಕರಣವನ್ನು, ಡೆಪ್ಯೂಟಿ ಕಮೀಷನರಿಗೆ ಅಥವಾ ಈ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಾಧಿಕಾರಕ್ಕೆ ವರದಿ ಮಾಡುವುದನ್ನು ಕಡ್ಡಾಯಗೊಳಿಸುವುದಕ್ಕಾಗಿ ಮತ್ತು ಜೀತಗಾರಿಕೆ ಪದ್ಧತಿಯ ಪ್ರಕರಣವನ್ನು ವರದಿ ಮಾಡುವಲ್ಲಿ ಉಂಟಾದ ಯಾವುದೇ ವಿಫಲತೆಯನ್ನು, ಗ್ರಾಮ ಪಂಚಾಯತಿಯ ಕರ್ತವ್ಯಗಳ ನೆರವೇರಿಕೆಯಲ್ಲಿ ಆದ ತಪ್ಪು ಎಂದು ಪರಿಗಣಿಸುವುದಕ್ಕಾಗಿ ಹಾಗೂ ಈ ವಿಫಲತೆಯು ಗ್ರಾಮ ಪಂಚಾಯತಿಯ ವಿಸರ್ಜನೆಯಲ್ಲಿ ಪರಿಣಮಿಸುವಂತೆ ಮಾಡುವುದಕ್ಕಾಗಿ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

**(2000ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 33 ಕಡತ ಸಂಖ್ಯೆ: ಸಂವ್ಯಶಾಇ 51 ಶಾಸನ 2000)**

## 2001ರ ಕರ್ನಾಟಕ ಅಧಿನಿಯಮ ಸಂಖ್ಯೆ:30

*(2001ನೇ ಸೆಪ್ಟೆಂಬರ್ 13ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

## ಕರ್ನಾಟಕ ಪಂಚಾಯತ್‌ರಾಜ್ (ಮೂರನೇ ತಿದ್ದುಪಡಿ) ಅಧಿನಿಯಮ, 2000

*(2001ನೇ ಸೆಪ್ಟೆಂಬರ್ 12ನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)*

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ನ್ನು (1993ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ;-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಪಂಚಾಯತ್ ರಾಜ್ (ಮೂರನೇ ತಿದ್ದುಪಡಿ) ಅಧಿನಿಯಮ, 2000 ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

2. **58ಎ ಹೊಸ ಪ್ರಕರಣದ ಸೇರ್ಪಡೆ.-** ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ (1993ರ ಕರ್ನಾಟಕ ಅಧಿನಿಯಮ 14) 58ನೇ ಪ್ರಕರಣದ ತರುವಾಯ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

" **58ಎ. ಜೀತಗಾರಿಕೆ ಪದ್ಧತಿ ಸಂಬಂಧದಲ್ಲಿ ವರದಿ ಸಲ್ಲಿಸುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರತಕ್ಕದ್ದು.-** ಜೀತಗಾರಿಕೆ ಪದ್ಧತಿ (ನಿರ್ಮೂಲನ)

---

(ಕರ್ನಾಟಕ ರಾಜ್ಯ ಪತ್ರದ ಭಾಗ-IVಎ ವಿಶೇಷ ಪತ್ರಿಕೆ ಸಂಖ್ಯೆ: 1669 ದಿನಾಂಕ 13.9.2001 ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 51 ಶಾಸನ 2000)

ಅಧಿನಿಯಮ, 1976ರ (1976ರ ಕೇಂದ್ರ ಅಧಿನಿಯಮ 19) ಅಡಿಯಲ್ಲಿ ನಿರ್ಮೂಲನಗೊಂಡ ಜೀತಗಾರಿಕೆ ಪದ್ಧತಿಯು ಪಂಚಾಯತಿ ಪ್ರದೇಶದಲ್ಲಿ ಪ್ರವರ್ತನಗೊಂಡ ಯಾವುದೇ ಪ್ರಕರಣದ ಬಗ್ಗೆ, ನಿಯಮಿಸಬಹುದಾದಂತೆ ಅಂಥ ನಮೂನೆಯಲ್ಲಿ ಮತ್ತು ಅಂಥ ಅಂತರದ ಅವಧಿಗಳಲ್ಲಿ ಡೆಪ್ಯೂಟಿ ಕಮೀಷನರಿಗೆ ಅಥವಾ ಈ ಸಂಬಂಧದಲ್ಲಿ ಸರ್ಕಾರವು ನಿರ್ದಿಷ್ಟಪಡಿಸಿದ ಯಾವುದೇ ಇತರ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು ಗ್ರಾಮಪಂಚಾಯತಿಗೆ ಕಡ್ಡಾಯವಾಗಿರತಕ್ಕದ್ದು, ಹೀಗೆ ಮಾಡಲು ತಪ್ಪಿದರೆ, 268ನೇ ಪ್ರಕರಣದ ಅಡಿಯಲ್ಲಿ ಅದಕ್ಕೆ ವಿಧಿಸಲಾದ ಕರ್ತವ್ಯಗಳ ನೆರವೇರಿಕೆಯಲ್ಲಿ ಆದ ತಪ್ಪು ಎಂದು ಅರ್ಥೈಸತಕ್ಕದ್ದು.”